# ಮನೆ ಖರೀದಿ; ಕಾಗದ ಪತ್ರದಲ್ಲಿ ಸತಿಪತಿಯರು!




■ ಹಿಂದಿ ಮೂಲ: **ಶರದ್ ಸಿಂಗ್**
■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಎಚ್.ಎಸ್. ಮೋನಪ್ಪ

ರಿತಿಕ್–ಸುಗಂಧಾ ದೈಹಿಕ ಸಂಬಂಧದ ಬಳಿಕ ಸುಗಂಧಾ ಗರ್ಭ ಧರಿಸುವ ಬಗ್ಗೆ ಹೆದರುತ್ತಾಳೆ. ವೈದ್ಯರ ಬಳಿ ಈ ಬಗ್ಗೆ ಮಾತನಾಡು ಎಂದು ರಿತಿಕ್‌ಗೆ ಹೇಳಿದಾಗ– 'ಆ ಬಗ್ಗೆ ಚಿಂತೆ ಮಾಡ್ಬೇಡ, ನಾನು ವೈದ್ಯರ ಹತ್ರ ಈ ಬಗ್ಗೆ ಮಾತಾಡಿದ್ದೇನೆ. ಶಿವಾ ಸಹ ಜೊತೆಗೆ ಬಂದಿದ್ದ. ಅವನು ಡಾಕ್ಟರ್‌ಗೆ ನಮ್ಮ ಸಂಬಂಧಗಳ ಬಗ್ಗೆ ಹೇಳಿದ. ಡಾಕ್ಟರ್ ಅಪ್ರಿಶಿಯೇಟ್ ಮಾಡಿದ್ದರು, ಹಿ ವಾಸ್ ಇಂಪ್ರೆಸ್ಡ್', ರಿತಿಕ್ ಉತ್ಸಾಹದಿಂದ ಹೇಳಿದ.

'ನಿನ್ನ ಜೊತೆ ಶಿವಾ ಸಹ ಬಂದಿದ್ದನೇ?' ಆಕಾಶವೇ ಕಳಚಿ ನನ್ನ ತಲೆಯ ಮೇಲೆ ಬಿದ್ದಂತಾಯಿತು. ಶಿವಾ ರಿತಿಕ್‌ನ ಲಂಗೋಟಿ ಸ್ನೇಹಿತ. ಆದರೆ ಇದರರ್ಥ, ಅವನೆದುರು ಲಂಗೋಟಿಯಲ್ಲಿಯೇ ಓಡಾಡಬೇಕು ಎಂದಲ್ಲ. ಅವನನ್ನು ಜೊತೆಗೆ ಕರೆದೊಯ್ಯುವ ಅವಶ್ಯಕತೆ ಏನಿತ್ತು? ಈಗ ನಾನು ಅವನ ಎದುರಿಗೆ ಹೇಗೆ ಹೋಗಲಿ? ಓಹ್! ಇಟ್ಸ್ ಡಿಸ್ಗಸ್ಟಿಂಗ್! ನಾನು ಸಂಕೋಚಪಡುತ್ತಿದ್ದರೆ, ಶಾರೀರಿಕ ಮತ್ತು ಮಾನಸಿಕವಾಗಿ ರೋಗಿಯಾಗುತ್ತೇನೆಂದು ಅರ್ಥ ಮಾಡಿಕೊಂಡೆ. ಸದಾ ಕಾಡುವ ಭಯ ಮನುಷ್ಯನನ್ನು ರೋಗಿಯನ್ನಾಗಿಸುತ್ತದೆ. ನಾನು ಮನಸ್ಸನ್ನು ಗಟ್ಟಿ ಮಾಡಿಕೊಂಡು, ಕಾಪರ್‌ಟೀ ಹಾಕಿಸಿಕೊಳ್ಳುವುದಾಗಿ ರಿತಿಕ್‌ಗೆ ಹೇಳಿದೆ. ಒಂದು ಬಾರಿ ಮಾತ್ರ ಲಜ್ಜಾಜನಕ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ, ಅದೂ ನಾಲ್ಕು ಜನರ ನಡುವೆ. ಆದರೆ ಆಸ್ಪತ್ರೆಯ ಹೊರಗೆ, ನಾನೇನು ಮಾಡಿಸಿಕೊಂಡೆ ಎಂದು ಯಾರಿಗೂ ಗೊತ್ತಾಗುವುದಿಲ್ಲ ಎಂದು ಯೋಚಿಸಿದೆ. ಗರ್ಭಪಾತ ಮಾಡಿಸಿಕೊಳ್ಳುವ ಅವಿವಾಹಿತೆಯರು ಸಹ ಇಂಥ ಮನಸ್ಥಿತಿಯಲ್ಲಿಯೇ ಸಾಗುತ್ತಾರೇನೋ... ಆದರೆ ನಾನು ರಿತಿಕ್‌ನೊಂದಿಗೆ ವಾಸಿಸುತ್ತಿರುವುದು ಎಲ್ಲರಿಗೂ ತಿಳಿದಿದೆ. ನಾವು ಗಂಡಹೆಂಡತಿ ಅಲ್ಲದಿದ್ದರೂ, ಗಂಡ ಹೆಂಡತಿಯಂತೆಯೇ ಇದ್ದೇವೆ.

'ಹೆದರಬೇಡ, ಎಲ್ಲವೂ ಸರಿಯಾಗುವುದು. ಇದೊಂದು ಸಾಮಾನ್ಯ ಪ್ರೊಸೀಜರ್ ಎಂದು ವೈದ್ಯರು ಹೇಳಿದ್ದಾರೆ. ಅವರು ಸರ್ಕಾರದ ಶಿಬಿರಗಳಲ್ಲಿ ಒಂದು ದಿನದಲ್ಲಿ ನೂರಾರು ಆಪರೇಷನ್ ಮಾಡ್ತಾರೆ, ಇದು ಅವರಿಗೆ ಚಿಟಿಕೆ ಹೊಡೆದಂತೆ, ಇಟ್ಸ್ ವೆರಿ ಸಿಂಪಲ್", ರಿತಿಕ್ ನನಗೆ ಧೈರ್ಯ ಹೇಳಿದ.

ರಿತಿಕ್‌ಗೆ, ನೀನೇ ಆಪರೇಷನ್ ಮಾಡಿಸಿಕೋ, ನಾನೇ ಏಕೆ ಮಾಡಿಸಿಕೊಳ್ಳಬೇಕು? ಎಂದು ಹೇಳಲು ಮನಸ್ಸಾಯಿತು. ನಂತರ ಆಸ್ಪತ್ರೆಯಿಂದ ಓಡಿ ಹೋಗಲು ಮನಸ್ಸಾಯಿತು. ನಾನೇಕೆ ಆಸ್ಪತ್ರೆಗೆ ಬಂದೆ? ಮನಸ್ಸಿನಲ್ಲಿ ಪಶ್ಚಾತ್ತಾಪ ಜಾಗೃತಗೊಂಡಿತು. ನಾನೇ ಖುದ್ದು ವೈದ್ಯರನ್ನು ವಿಚಾರಿಸಬೇಕಿತ್ತು, ಕೀರ್ತಿ ಸಹ ಜೊತೆಗೆ ಬರುವುದಾಗಿ ಹೇಳಿದ್ದಳು.

'ನೀವೇನಾ ಸುಗಂಧಾ?' ಬಿಳಿ ಕೋಟು ಧರಿಸಿದ್ದ ವೈದ್ಯರು ಹೇಳಿದರು. ಅವರೊಂದಿಗೆ ಓರ್ವ ಮಹಿಳಾ ಚಿಕಿತ್ಸಕರೂ ನಿಂತಿದ್ದರು.

'ಇವರು ನನ್ನ ವೈಫ್, ಇವರು ಕಾಪರ್‌ಟೀ ಹಾಕ್ತಾರೆ, ಅದರ ಬಗ್ಗೆ ಎಲ್ಲವನ್ನು ವಿವರವಾಗಿ ಹೇಳ್ತಾರೆ. ಡೋಂಟ್ ಬಿ ಶೈ', ವೈದ್ಯರು ಮುಗುಳ್ನಗುತ್ತಾ ಹೇಳಿದರು. ನಂತರ ರಿತಿಕ್‌ಗೆ ಹೇಳಿದರು, 'ಬನ್ನಿ, ನೀವು ನನ್ನ ಚೇಂಬರ್‌ನಲ್ಲಿ ಕೂತಿರಿ. ನನ್ನ ಮಗ ಸಹ ನಿಮ್ಮ ಕಂಪನಿಯಲ್ಲಿಯೇ ಇದ್ದಾನೆ. ಅವನು ಎರಡು ತಿಂಗಳ ಮೊದಲು ಚೆನ್ನೈ ಆಫೀಸಿನಲ್ಲಿ ಜಾಯಿನ್ ಆಗಿದ್ದಾನೆ'.

ವೈದ್ಯರು ಮಾತನಾಡುತ್ತಾ ರಿತಿಕ್‌ನನ್ನು ತಮ್ಮ ಚೇಂಬರ್‌ಗೆ ಕರೆದೊಯ್ದರು. ವೈದ್ಯರ ಹೆಂಡತಿ ನನಗೆ ಹೇಳಿದರು, 'ಬನ್ನಿ, ನಾನು ಆ ಮಹಿಳಾ ಚಿಕಿತ್ಸಕರೊಂದಿಗೆ ಆಪರೇಷನ್ ಥಿಯೇಟರ್‌ಗೆ ಹೋದೆ. ನಾನು ಮೊದಲ ಬಾರಿಗೆ ಒಂದು ಆಪರೇಷನ್ ಥಿಯೇಟರ್‌ಗೆ ಹೋಗಿದ್ದೆ. ನನ್ನ ಮನಸ್ಸು ಗಾಬರಿಗೊಂಡಿತು.

'ನೀವು ಹೆದರಬೇಡಿ, ನಿಮಗೆ ಸ್ವಲ್ಪವೂ ಕಷ್ಟವಾಗುವುದಿಲ್ಲ. ನೀವು ಸುಗಂಧಾ, ನಿಮ್ಮ ಹೆಸರು ತುಂಬಾ ಮುದ್ದಾಗಿದೆ', ವೈದ್ಯರು ನನಗೆ ಸಲ್ವಾರ್ ಕಳಚಲು ಸಂಜ್ಞೆ ಮಾಡಿದರು.

'ನೀವು ಜಾಬ್‌ನಲ್ಲಿದ್ದೀರೋ ಅಥವಾ ಹೌಸ್ ವೈಫೋ?' ವಿವಾಹಿತರಿಗೆ ಕಾಪರ್‌ಟೀ ಹಾಕುವ ವೈದ್ಯರ ಬಾಯಿಯಿಂದ, 'ವೈಫ್' ಶಬ್ದ ಬರುವುದು ಸಹಜವಾಗಿತ್ತು.

'ಜಾಬ್‌ನಲ್ಲಿದ್ದೇನೆ', ಸಲ್ವಾರ್ ಕಳಚಿದ ನಂತರ ವೈದ್ಯರ ಸಂಜ್ಞೆಯಂತೆ ನನ್ನ ಪ್ಯಾಂಟಿಯನ್ನು ಕಳಚಿದೆ.

'ಬಿ ಈಸೀ, ನಿಮಗೆ ಯಾವುದೇ ಕಷ್ಟವಾಗಲ್ಲ ಅಂತ ನಾನು ಹೇಳಿದೆನಲ್ಲ... ನಿಮಗೆ ಈಗ್ಲೇ ಮಗು ಬೇಡ ಅಲ್ವಾ? ಗುಡ್ ಡಿಸಿಷನ್". ವೈದ್ಯರು ಈ ನಡುವೆ ನನ್ನೊಂದಿಗೆ ಮಾತನಾಡುತ್ತಿದ್ದರು, ತಮ್ಮ ಕೆಲಸವನ್ನೂ ಮಾಡುತ್ತಿದ್ದರು. ನಾನು ಆಪರೇಷನ್ ಥಿಯೇಟರ್‌ನಿಂದ ಹೊರಟ ನಂತರ, ನನ್ನ ಜೀವನವೇ ಬದಲಾದಂತೆ ಕಂಡಿತು. ಇದು ನನ್ನ ಮಾನಸಿಕ ಸ್ಥಿತಿಯಿಂದ ಮನದಟ್ಟಾಗುತ್ತಿತ್ತು. ಇದು ಮಾನಸಿಕವಾಗಿ ಅನುಭವವಾಗುತ್ತಿತ್ತು; ಆದರೆ ಜೀವನ ಹೇಗಿತ್ತೋ, ಹಾಗೆಯೇ ಇತ್ತು. ಆಸ್ಪತ್ರೆಯಿಂದ ಹೊರಡುವಾಗ, ಎಲ್ಲರೂ ನನ್ನನ್ನೇ ನೋಡುತ್ತಿದ್ದಾರೆ, ಅವರಿಗೆ ನನ್ನ ವಾಸ್ತವಿಕತೆಯ ಅರಿವಿದೆ, ನಾನಿಲ್ಲಿಗೆ ಏಕೆ ಬಂದಿದ್ದೆ ಎಂಬುದು ಅವರಿಗೆ ಗೊತ್ತಿದೆ, ನಾನೀಗ 'ಟೆಂಪರವರಿ ಬಂಜೆ'ಯಾಗಿದ್ದೇನೆ ಎಂದು ಅನ್ನಿಸುತ್ತಿತ್ತು.

ನನಗೆ ಅಳು ಬರುತ್ತಿತ್ತು. ಮನೆಗೆ ಬಂದ ನಂತರವೂ ನಾನು ರಿತಿಕ್‌ನೊಂದಿಗೆ ಮಾತನಾಡಲಿಲ್ಲ. ರಿತಿಕ್ ಒಂದೆರಡು ಬಾರಿ ಮಾತನಾಡಲು ಪ್ರಯತ್ನಿಸಿದ. ಆದರೆ ನನ್ನ ಮನಸ್ಥಿತಿಯನ್ನು ಮನಗಂಡು

